ಶ್ರೀಮತಿ ಬಸವರಾಜೇಶ್ವರಿ :— ಕಂಟ್ರಾಕ್ಟರು ಕೆಲಸಮಾಡಿರುವ ಕಡೆ ಬಿರುಕು ಕಾಣಿಸಿಲ್ಲ. ಹಳೇ ಕೆರೆಯಲ್ಲಿ ಬಿರುಕು ಬಂದಿರುವುದರಿಂದ ಪರಿಶೀಲಿಸಬೇಕಾಗುವುದು.

CONSTRUCTION OF A CAUSEWAY ACROSS NORTH PENNAR RIVER

560. SRI K. M. PUTTASWAMY (Chickballapur):—

Will the Minister for Public Works be pleased to state :—

(*a*) Since when the construction of a causeway across North Pennar river near Pogettihalli in Chickballapur taluk is pending;

(*b*) Whether it would be completed within a year;

(*c*) Whether any representation has been received for the construction of a causeway across Kumudvathi river near Puttaparthi in Bagepally Taluk;

(*d*) if so, the action taken ?

SRI BASAVARAJ MAGAVI (Deputy Minister for Public Works):

(*a*) Since about six years.

(*b*) After approval to the balance works, the work will be completed in about a year.

(*c*) Yes

(*d*) Its necessity is being examined

ಶ್ರೀ ಕೆ. ಎಂ. ಪುಟ್ಟಸ್ವಾಮಿ :— ಒಡ್ಡುದಾರಿ ಹಾಕಬೇಕೆಂದು ಕೆಲಸ ಶುರುಮಾಡಿ ಆರು ವರ್ಷವಾಯಿತು. ಮೊದಲು ಅಂದಾಜು ಮಾಡಿ, ಆದನ್ನು ಕಟ್ಟುವುದಕ್ಕೆ ಪ್ರಯತ್ನ ಪಟ್ಟು, ಪುನಃ ನಿಂತು ಹೋಗಿ, ವಿಜಿಲೆನ್ಸ್ ಕಮಿಷನ್ನಿಗೆ ಹೋಗಿ ತೊಂದರೆಯಲ್ಲಿದೆ. ಇನ್ನೊಂದು ವರ್ಷದೊಳಗಾಗಿ ಪೂರ್ತಿ ಮಾಡಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಯಾರು ಇದರಲ್ಲಿ ಇನ್‌ವಾಲ್ವ್ ಆಗಿದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಬಸವರಾಜ ಮಾಗಾವಿ :- ಇದು ನಾನ್-ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ರಸ್ತೆ, ಕಡಿಮೆ ವೆಚ್ಚದಲ್ಲಿ ಕಲ್ಲುಚಪ್ಪಡಿಗಳನ್ನು ಹಾಕಿ ಗಾಡಿಗಳು ಹೋಗುವುದಕ್ಕೆ ಹಾದಿ ಮಾಡಿಕೊಡಬೇಕು ಎಂದು ಅಂದಾಜು ಮಾಡಲಾಯಿತು. ಕೆಲಸ ಪ್ರಾರಂಭ ಮಾಡುವುದರಲ್ಲಿ, ಆ ರೀತಿ ಕೆಲಸ ಮಾಡಿದರೆ ಆಗುವುದಿಲ್ಲ, ವ್ಯಯ ಮಾಡಿದ್ದು ನಿರುಪಯೋಗವಾಗುತ್ತದೆ, ಎಂದು ಬೇರೆ ಎಸ್ಟಿಮೇಟ್ ತಯಾರುಮಾಡಲಾಗಿ ೬೦ ರಿಂದ ೮೦ ಸಾವಿರ ರೂಪಾಯಿವರೆಗೂ ಆಗುವ ಹಾಗೆ ಇದೆ ಎಂದು ಗೊತ್ತಾಯಿತು. ನಾನ್ ಪಿ. ಡಬ್ಲ್ಯ್ಯೂ. ಡಿ. ರಸ್ತೆಗಳ ಮೇಲೆ ಇಷ್ಟೊಂದು ಹಣವನ್ನು ಹಾಕುವುದಕ್ಕೆ ಸರ್ಕಾರದ ಹತ್ತಿರ ಹಣದ ಅಭಾವ ವಿರುವುದರಿಂದ ಈ ವರ್ಷ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೂಡ ಅದನ್ನು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ:- ಹಿಂದೆ ಕೆಲಸ ಶುರು ಮಾಡುವುದಕ್ಕೆ ಪ್ರಾರಂಭ ಮಾಡಿ, ಕೆಲಸವನ್ನು ನಿಲ್ಲಿಸಿ ಸುಮಾರು ಆರು ವರ್ಷವಾಗಿದೆ. ಪ್ರವಾಹ ಬಂದಾಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಜನ

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ತಿರುಗಾಡುವುದಕ್ಕೆ ತೊಂದರೆಯಾಗಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದ್ದರೂ ಕಂಟ್ರಾಕ್ಟರಿಗೆ ಕೊಟ್ಟು, ಪುನಃ ಆ ಕೆಲಸವನ್ನು ನಿಲ್ಲಿಸಿ ಸುಮಾರು ೮೦ ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿ ಕಳುಹಿಸಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದಾರೆ. ಇದರಲ್ಲಿ ಅಕ್ರಮವೇನಾದರೂ ನಡೆದಿದೆಯೇ ? ಅಕ್ರಮ ಆಗಿದ್ದರೆ, ತಪ್ಪಿತಸ್ಥರನ್ನು ಶಿಕ್ಷೆ ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆಯೇ? ೮೦ ಸಾವಿರ ರೂಪಾಯಿಗೆ ಮರು ಅಂದಾಜಾಗಿದ್ದರೆ, ಈ ವರ್ಷದೊಳಗಾಗಿ ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಪಡುತ್ತಾರೆಯೇ ?

ಶ್ರೀ ಬಸವರಾಜ, ಮಾಗಾವಿ:- ನಾನ್ ಪಿ. ಡಬ್ಲ್ಯು. ಡಿ. ರೋಡ್ಸ್ ಮೇಲೆ ಬಹುತೇಕವಾಗಿ ಇಂಥ ಕಾಸ್‌ವೇಸ್ ಕಟ್ಟುವುದಕ್ಕೆ ಬರುವುದಿಲ್ಲ, ಅದಕ್ಕೆ ನಮ್ಮ ಹತ್ತಿರ ದುಡ್ಡು ಇರುವುದಿಲ್ಲ. ಪಿ. ಡಬ್ಲ್ಯು. ಡಿ. ರೋಡ್ಸ್ ಮೇಲೆ ಕಟ್ಟುವುದಕ್ಕೇ ಸಾಕಷ್ಟು ದುಡ್ಡು ಇರುವುದಿಲ್ಲ. ಆದರೂ ಕೂಡ ಜನಗಳಿಗೆ ಅನುಕೂಲವಾಗಲಿ ಎಂದು ಕಾರ್ಟ್ ಸ್ಲಾಬ್ ಹಾಕಿ, ಚಕ್ಕಡಿಗಳು, ಬಂಡಿಗಳು ಹೋಗುವ ಹಾಗೆ ಮಾಡ ಬೇಕೆಂದು ಅಂದಾಜು ತಯಾರು ಮಾಡಿ ಎಕ್ಸಿಕ್ಯೂಟಿವ್ ಇಂಜಿನಿಯರು ಕೆಲಸ ಪ್ರಾರಂಭ ಮಾಡಿದರು. ಆದರೆ ಅಲ್ಲಿ ಪಕ್ಕಾ ಸೇತುವೆ ಆಗಬೇಕಾದ ಪರಿಸ್ಥಿತಿ ಬಂತು. ಹೊಸದಾಗಿ ಅಂದಾಜು ಮಾಡಿದಾಗ ೬೦ ರಿಂದ ೮೦ ಸಾವಿರ ರೂಪಾಯಿಗಳವರೆಗೂ ಖರ್ಚಾಗಬಹುದೆಂದು ಸೂಪರಿಂಟೆಂಡಿಂಗ್ ಇಂಜಿನಿಯರು ಹೇಳುತ್ತಾರೆ. ಈ ರೀತಿಯ ಕೆಲಸಗಳಿಗೆ ಒದಗಿಸಿದ್ದ ಒಂದೂವರೆ ಕೋಟಿ ರೂಪಾಯಿಗಳಲ್ಲಿ ಒಂದೇ ಕೆಲಸಕ್ಕೆ ಅರ್ಧದಷ್ಟು ಖರ್ಚಾಗುತ್ತದೆಂದು ತಿಳಿದು ಅದನ್ನು ತೆಗೆದುಕೊಳ್ಳಲು ಆಗಲಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ ಎಂದು ತಿಳಿದು ಕೊಂಡು ಯಾವುದಾದರೂ ರೀತಿಯಿಂದ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ:- ಅಕ್ರಮ ಮಾಡಿದ್ದಾರೆ. ವಿಜಿಲೆನ್ಸ್ ಕಮಿಷನ್ನಿಗೆ ಹೋಗಿದೆ. ಅದರ ತೀರ್ಮಾನ ಏನಾಯಿತು ? ಈಗ ೮೦ ಸಾವಿರ ರೂಪಾಯಿ ಎಸ್ಟಿಮೇಟ್ ಬಂದಿದೆ ಎಂದು ಹೇಳುತ್ತಾರೆ. ಒಂದು ವರ್ಷದೊಳಗಾಗಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು ಆಕಾಶದ ಗಾಳಿಪಟವಾಗುತ್ತದೆಯೇ ಅಥವಾ ಜಾಗ್ರತೆ ಮಾಡುವುದಕ್ಕೆ ಸರ್ಕಾರ ಭರವಸೆ ಕೊಡುತ್ತದೆಯೇ?

ಶ್ರೀ ಬಸವರಾಜ ಮಾಗಾವಿ :- ವಿಜಿಲೆನ್ಸ್ ಕಮಿಷನ್ ತೀರ್ಮಾನ ಇನ್ನೂ ಬಂದಿಲ್ಲ. ಅಧಿಕಾರಿಗಳು ವಿಚಾರಣೆ ಮಾಡಿದ್ದರಲ್ಲಿ ಅಂಥ ಅವ್ಯವಹಾರ ಯಾವುದೂ ನಡೆದಿಲ್ಲ ಎಂದು ಕಂಡು ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪ :- ಮಾನ್ಯ ಚಿಕ್ಕಬಳ್ಳಾಪುರದ ಸದಸ್ಯರನ್ನು ಈ ರೀತಿ ಈ ಮಂತ್ರಿಗಳು ಕಾಣಬೇಕಾದರೆ, ಅವರು ನಮ್ಮ ಮೇಲೆ ಬಿದ್ದಂತೆ ಅವರ ಮೇಲೂ ಬಿದ್ದರೆ ಮೂರು ತಿಂಗಳಲ್ಲಿ ಕೆಲಸವಾಗುತ್ತದೆ. ಅವರ ಮೇಲೆ ಏಕೆ ಬೀಳಬಾರದು ಮತ್ತು ಕೆಲಸ ಜಾಗ್ರತೆ ಮಾಡಿಸಿಕೊಳ್ಳಬಾರದು ಎಂದು ಅವರನ್ನು ಕೇಳುತ್ತೇನೆ ?

ಉಪಾಧ್ಯಕ್ಷರು:- ಈ ಪ್ರಶ್ನೆ ಇಲ್ಲಿ ಉದ್ಭವಿಸುದಿಲ್ಲ.

ಶ್ರೀ ಇ. ನಾರಾಯಣ ಗೌಡ :- ಮೊದಲು ಅಂದಾಜು ಮಾಡಿದಾಗ ಇದು ನಾನ್ ಪಿ. ಡಬ್ಲ್ಯು. ಡಿ. ರೋಡ್ ಎಂದು ಗೊತ್ತಾಗಲಿಲ್ಲವೇ ? ಇಷ್ಟು ಹಣ ಖರ್ಚು ಮಾಡಿ ಈ ಕೆಲಸವನ್ನು ಕೈ ಬಿಡುವ ಉದ್ದೇಶವಿದೆಯೇ ಅಥವಾ ಪೂರೈಸಬೇಕೆಂದಿದೆಯೋ ?

ಶ್ರೀ ಬಸವರಾಜ ಮಾಗಾವಿ :- ಇದು ನಾನ್-ಪಿ. ಡಬ್ಲ್ಯು. ಡಿ. ರೋಡ್ ಎಂಬುದು ಗೊತ್ತಾಗಿ ಅಂದಾಜು ಮಾಡಲಾಯಿತು. ಇಂಥ ಕೆಲಸಗಳಿಗೂ ಸ್ವಲ್ಪ ಹಣವನ್ನು ಇಟ್ಟುಕೊಂಡಿರುತ್ತೇವೆ. ಈಗಾಗಲೇ ೨೪ ಸಾವಿರ ರೂಪಾಯಿ ಮೆಚ್ಚ್ ಮಾಡಿದ್ದೇವೆ. ಸ್ವಲ್ಪದರಲ್ಲೇ ಮಾಡಬೇಕು ಎಂದು ವಿಚಾರವಿತ್ತು. ಸೂಪರಿಂಟೆಂಡಿಂಗ್ ಇಂಜಿನಿಯರು ನೋಡಿ, ಸ್ವಲ್ಪದರಲ್ಲೇ ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ, ಮಾಡುವುದಾದರೆ ಫುಲ್ ಫ್ಲೆಜ್ಡ್ ಕಾಸ್‌ವೇ ಮಾಡಬೇಕು. ಅದಕ್ಕೆ ೬೦ ರಿಂದ ೮೦ ಸಾವಿರ ರೂಪಾಯಿ ಅಂದಾಜಾಗುತ್ತದೆ ಎಂದು ತಿಳಿಸಿದ್ದಾರೆ.

Mr Deputy Speaker:- Questiones 582 and 703 may be taken up together.